# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್.ಸಿ.* 251/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ವೃಷಬೇಂದ್ರ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಸಿದ್ದಪ್ಪ | | **16.04.2024** |
| **ವಯಸ್ಸು** | ಃ **48** ವರ್ಷ | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** ಃ **09** | |
| **ವಾಸಸ್ಥಳ** | ಃ ಗೌಡರಹುಂಡಿ | **ಚಾ.ಸಾ.** ಃ **05** | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಶಿವರಾಜಪ್ಪ ಇವರ ಪರಿಚಯ ಇದೆ. ಅವರೀಗ ಮರಣಹೊಂದಿದ್ದಾರೆ ಅವರು ಕೊಲೆಯಾಗಿದೆ ಎಂದು ಗೊತ್ತಾಗಿದೆ. *2021* ರಲ್ಲಿ ಅವರ ಕೊಲೆಯಾಗಿದೆ. ಚಾ.ಸಾ– *21* ನಾಗಣ್ಣ ಇವರ ಪರಿಚಯವಿದೆ. ಶಿವರಾಜಪ್ಪ ಕಾಣೆಯಾಗಿದ್ದ ದಿನ ನಾನು ಮತ್ತು ನಾಗಣ್ಣ ಕೆಂಚಮಳ್ಳಿ ಗ್ರಾಮಕ್ಕೆ ನಾಗಣ್ಣನಿಗೆ ಅಡುಗೆ ಕೆಲಸ ಕೊಡಿಸಲು ಹೋಗಿದ್ದೆವು. ಆ ದಿನ ಸಂಜೆ *7.30* ರಿಂದ *7.45* ಗಂಟೆಯಲ್ಲಿ ಕೆಂಚಮಳ್ಳಿಯಿಂದ ವಾಪಸ್ಸು ಬಂದಿದ್ದೇವು. ಆ ಕಾಲಕ್ಕೆ ಅತ್ತಾವ್ಳು ಕಟ್ಟೆ ಹತ್ತಿರ ನಾನು ಬರುತ್ತಿರುವಾಗ *1* ನೇ ಆರೋಪಿತ ಶರತ್ ಕುಮಾರ್ ಇವರು ಟ್ರಾಕ್ಟರ್ ನಲ್ಲಿ ಅತ್ತಾವ್ಳು ಕಡೆಯಿಂದ ರಾಮಪುರ ನಾಲೆ ಕಡೆಗೆ ಹೋಗುತ್ತಿದ್ದರು. ಆ ಕಾಲಕ್ಕೆ ಟ್ರಾಕ್ಟರ್ ನಲ್ಲಿ ಇನ್ನೊಬ್ಬರು ಕುಳಿತಿದ್ದರು. ಆ ದಿನ ನಾನು ಮತ್ತು ನಾಗಣ್ಣ ನಮ್ಮ ಗ್ರಾಮಕ್ಕೆ ಹೋಗಿದ್ದೆವು. ನಂತರ ಶಿವರಾಜಪ್ಪನ ಕೊಲೆಯಾಗಿದೆ ಎಂದು ಗೊತ್ತಾಗಿತ್ತು ಆ ಕಾಲಕ್ಕೆ ಶರತ್ ಕುಮಾರ್ ಇವರನ್ನು ಪೋಲೀಸರು ದಸ್ತಗಿರಿ ಮಾಡಿದ್ದರು. ಆ ಕಾಲಕ್ಕೆ ಪೋ.ಠಾಣೆಯಲ್ಲಿ ನನಗೆ ಶರತ್ ಕುಮಾರ್ ನನ್ನು ತೋರಿಸಿದ್ದರು. ಪೋ.ಠಾಣೆಯಲ್ಲಿ ಶರತ್ ಕುಮಾರ್ ಮತ್ತು ಮಲ್ಲಿಗಮ್ಮ

ಇದ್ದರು. ನಂತರ ಮದು ಎನ್ನುವವರನ್ನು ಸಹ ಪೋ.ಠಾಣೆಗೆ ಕರೆದುಕೊಂಡು ಬಂದಿದ್ದರು. ಆ ಮದು ಎನ್ನುವವರು ಅಹಲ್ಯಾ ಗ್ರಾಮದವರು ಎಂದು ಗೊತ್ತಾಗಿತ್ತು ಆದರೆ ಅವರನ್ನು ಅದಕ್ಕಿಂತ ಮೊದಲು ಎಲ್ಲಿಯೂ ನೋಡಿರಲಿಲ್ಲ. ಪೋ.ಠಾಣೆಯಲ್ಲಿ ಶರತ್ ಕುಮಾರ್ ಗೆ ಸಂಬಂದಪಟ್ಟ ಯಾವುದೇ ವಸ್ತುವನ್ನು ನಾನು ನೋಡಿಲ್ಲ. ಶಿವರಾಜಪ್ಪನ ಕೊಲೆ ಯಾವ ಕಾರಣಕ್ಕೆ ಆಗಿದೆ ಎಂದು ಗೊತ್ತಿಲ್ಲ. ಆ ಶರತ್ ಕುಮಾರ್ ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು. ಸಾಕ್ಷಿ ಸ್ವತಃ ಹೇಳುತ್ತಾರೆ ಶರತ್ ಕುಮಾರ್ ಮತುತ ಮಲ್ಲಿಗಮ್ಮ ಅನೈತಿಕ ಸಂಬಂದ ಹೊಂದಿದ್ದು ಶರತ್ ಕುಮಾರ್ ನ ಮಗ ಮತ್ತು ಮಲ್ಲಿಗಮ್ಮನ ಮಗಳು ಒಬ್ಬೊರಿಗೊಬ್ಬರು ಪ್ರೀತಿ ಮಾಡುತ್ತಿದ್ದು ಅವರಿಬ್ಬರ ಮದುವೆಯಾದರೆ ಇವರ ಅನೈತಿಕ ಸಂಬಂದಕ್ಕೆ ತೊಂದರೆಯಾಗುತ್ತದೆ ಎಂದು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು. ಆ ದಿನ ಶರತ್ ಕುಮಾರ್ ಓಡಿಸುತ್ತಿದ್ದ ಟ್ರಾಕ್ಟರ್ ಸಂಖ್ಯೆ ***5686*** ಇರಬಹುದು. ಶರತ್ ಕುಮಾರ್ ಇವರು ಶಿವರಾಜಪ್ಪನನ್ನು ಕೊಲೆ ಮಾಡಿ ರಾಮಪುರ ನಾಲೆಗೆ ಹಾಕಿದ್ದಾರೆ ಎಂದು ಗೊತ್ತಾಗಿತ್ತು. ಮದು ಸಹ ಆ ಪ್ರಕರಣದಲ್ಲಿ ಪಾಲ್ಗೊಂಡಿದ್ದಾನೆ ಎಂದು ಗೊತ್ತಾಗಿದೆ ಆದರೆ ಅವನು ಏನು ಮಾಡಿದ್ದಾನೆ ಎಂದು ಗೊತ್ತಿಲ್ಲ.

*2.* ನಂತರ ಈಜುಗಾರರನ್ನು ಕರೆಸಿ ರಾಮಪುರ ನಾಲೆಯಿಂದ ಶಿವರಾಜಪ್ಪ ಇವರ ಶವವನ್ನು ತೆಗೆಸಿದ್ದರು ಆ ಸ್ಥಳದಲ್ಲಿ ಒಂದು ಆ್ಯಂಗುಲರ್, ಒಂದ ಪಂಚೆ ಮತ್ತು ಒಂದು ಕುಡುಗೋಲನ್ನು ಸಹ ಅಮಾನತ್ತುಪಡಿಸಿಕೊಂಡಿದ್ದರು. ಶರತ್ ಕುಮಾರ್ ಇವರೇ ಆ ವಸ್ತುಗಳನ್ನು ಅಲ್ಲಿ ಹಾಕಿರುವುದಾಗಿ ಹೇಳಿದ್ದರು. ಆ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡ ಬಳಿಕ ಪೋಲೀಸರು ಶರತ್ ಕುಮಾರ್ ರವರನ್ನು ಕರೆದುಕೊಂಡು ಹೋಗಿದ್ದರು. ಈಗ

ನಾನು ನೋಡುತ್ತಿರುವ ಎಂ.ಒ *1* ರಿಂದ *3* ಎಂದು ಗುರುತಿಸಿರುವ ವಸ್ತುಗಳು ಆ ಕಾಲಕ್ಕೆ ಅಮಾನತ್ತು ಪಡಿಸಿಕೊಂಡ ವಸ್ತುಗಳು ಇವೆ. ಶಿವರಾಜಪ್ಪನ ಶವದ ಮೇಲೆ ಒಂದು ಪಟಾಪಟಿ ಚಡ್ಡಿ ಇತ್ತು. ಈಗ ನಾನು ನೋಡುತ್ತಿರುವ ಎಂ.ಒ *4* ಆ ಪಟಾಪಟಿ ಚಡ್ಡಿ ಇದೆ.

*3.* ಶಿವರಾಜಪ್ಪ ನವರು ಕಾಣೆಯಾಗಿ *5-6* ದಿನಗಳ ಬಳಿಕ ಮೈಸೂರಿನ ಕೆ.ಆರ್ ಆಸ್ಪತ್ರೆಯ ಶವಾಗಾರದಲ್ಲಿ ಅವರ ಶವವನ್ನು ನೋಡಿದ್ದೆ. ಆ ಕಾಲಕ್ಕೆ ಶಿವರಾಜಪ್ಪನ ತಲೆಗೆ ಮತ್ತು ಎರಡು ಹಿಮ್ಮಡಿಗಳಿಗೆ ಕುಡುಗೋಲು ಮತ್ತು ಮಚ್ಚಿನಿಂದ ಹೊಡೆದ ಗಾಯಗಳಾಗಿತ್ತು. ಶವಾಗಾರದಲ್ಲಿ ನೋಡಿದಾಗ ನನ್ನೊಂದಿಗೆ ಸೋಮಣ್ಣ, ಗಿರಿಯಯ್ಯ, ರಾಜಣ್ಣ ಹಾಜರಿದ್ದರು. ಆ ಕಾಲಕ್ಕೆ ನಾನು ಶವ ಪಂಚನಾಮೆಗೆ ಸಹಿ ಹಾಕಿದೆ. ಈಗ ನಾನು ನೋಡುತ್ತಿರುವ ನಿ.ಪಿ-*9* ಆ ಶವ ಪಂಚನಾಮೆ ಇದ್ದು ಅದರಲ್ಲಿ ನನ್ನಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*9*(ಸಿ) ಎಂದು ಗುರುತಿಸಿದೆ. ನಂಜನಗೂಡು ನ್ಯಾಯಾಧೀಶರ ಮುಂದೆ ಕೆಂಚಮಳ್ಳಿಯಿಂದ ವಾಪಸ್ಸು ಬರುತ್ತಿರುವಾಗ ಶರತ್ ಕುಮಾರ್ ನನ್ನು ಟ್ರಾಕ್ಟರ್ ನಲ್ಲಿ ಹೋಗುವಾಗ ನೋಡಿದ್ದ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿನ ಸಹಿ ನನ್ನದೇ ಇದೆ. ಸದರಿ ಹೇಳಿಕೆಯನ್ನು ನಿ.ಪಿ-*12* ಮತ್ತು ಸಹಿಯನ್ನು ನಿ.ಪಿ-*12*(ಎ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ *5* ಪೊಟೋಗಳಲ್ಲಿ ಕಾಣುವ ಟ್ರಾಕ್ಟರ್ ಆ ದಿನ ಶರತ್ ಕುಮಾರ್ ಓಡಿಸುತ್ತಿದ್ದ ಟ್ರಾಕ್ಟರ್ ಇದೆ. ಸದರಿ ಪೊಟೋಗಳನ್ನು ನಿ.ಪಿ-*13* ರಿಂದ *17* ಎಂದು ಗುರುತಿಸಿದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು* ಭಾಗಶಃ *ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

*4.* ದಿಃ*09.06.2021* ರಂದು ನನ್ನನ್ನು ಪೋ.ಠಾಣೆಗೆ ಕರೆಸಿ ಈ ಪ್ರಕರಣದ *3* ನೇ ಆರೋಪಿತ ಮದು ಇತನನ್ನು ತೋರಿಸಿದಾಗ ಆತನೇ ದಿಃ*28.05.2021* ರಂದು ಶರತ್ ಕುಮಾರ್ ಜೊತೆಯಲ್ಲಿ ಟ್ರಾಕ್ಟರ್ ನಲ್ಲಿ ಹೋಗುತ್ತಿದ್ದ ವ್ಯಕ್ತಿ ಎಂಬುದಾಗಿ ಗುರುತಿಸಿದ್ದೆ ಎಂದರೆ ನಿಜ. ಅದೇ ದಿನ ಪೋ.ಠಾಣೆಯ ಆವರಣದಲ್ಲಿ ಟ್ರಾಕ್ಟರ್ ಮತ್ತು ಟ್ರೇಲರ್ ಅನ್ನು ನನಗೆ ತೋರಿಸಿದ್ದು ಅದೇ ಟ್ರಾಕ್ಟರ್ ಮತ್ತು ಟ್ರೇಲರ್ ಶರತ್ ಕುಮಾರ್ ಮತ್ತು ಮದು ಹೋಗುತ್ತಿದ್ದ ಟ್ರಾಕ್ಟರ್ ಮತ್ತು ಟ್ರೇಲರ್ ಎಂಬುದಾಗಿ ಗುರುತಿಸಿದ್ದೆ ಎಂರದೆ ನಿಜ. ಆ ಟ್ರಾಕ್ಟರ್ ಮತ್ತು ಟ್ರೇಲರ್ ಸಂಖ್ಯೆ ಕೆಎ*-09-*ಟಿ*-5688* ಮತ್ತು ಕೆಎ*-09-*ಟಿ*-5689* ಆಗಿತ್ತು ಎಂದರೆ ನಿಜ. ನಂತರ ಶರತ್ ಕುಮಾರ್ ಶಿವರಾಜಪ್ಪನ ಕೊಲೆ ಮಾಡಿ *3* ನೇ ಆರೋಪಿತ ಮದು ಜೊತೆ ಸೇರಿಕೊಂಡು ಟ್ರಾಕ್ಟರ್ ನಲ್ಲಿ ಶಿವರಾಜಪ್ಪನ ಶವವನ್ನು ಹಾಕಿಕೊಂಡು ರಾಮಪುರ ನಾಲೆಗೆ ಬಿಸಾಕಿದ್ದಾರೆ ಎಂದು ಪೋಲೀಸರಿಂದ ಗೊತ್ತಾಗಿತ್ತು ಎಂದರೆ ನಿಜ. ಈ ಎಲ್ಲಾ ವಿಷಯದ ಬಗ್ಗೆ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ನಿಜ.

<u>ಪಾಟೀ ಸವಾಲು ಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

*5.* ಆಸ್ಪತ್ರೆಯ ಶವಾಗಾರದಲ್ಲಿ ಶವ ಮಹಜರ್ ಗೆ ಸಹಿ ಹಾಕಿದ್ದೇನೆ. ನಾನು ನೋಡಿದಾಗ ಶವ ಊದಿಕೊಂಡು ಕೊಳೆತುಹೋಗಿತ್ತು ಎಂದರೆ ನಿಜ. ಶವಾಗಾರದ ಒಳಗೆ ಯಾರನ್ನು ಬಿಟ್ಟುಕೊಂಡಿರಲಿಲ್ಲ ಎಂದರೆ ಸರಿಯಲ್ಲ. *3-4* ಮುಖ್ಯಸ್ಥರನ್ನು ಮಾತ್ರ ಬಿಟ್ಟಿದ್ದರು. ಶವ

ಕೊಳೆತಿದ್ದರಿಂದ ಗುರುತಿಸಲು ಆಗದ ಸ್ಥಿತಿಯಲ್ಲಿತ್ತು ಎಂದರೆ ನಿಜ. ಶವದ ಮೇಲಿನ ಬಟ್ಟೆಗೆ ಕೆಸರು ಹತ್ತಿತ್ತು ಮತ್ತು ಕೊಳೆತು ಹೋಗಿತ್ತು ಎಂದರೆ ಸರಿಯಲ್ಲ. ಹೆಣ ಕಾಲುವೆಯಿಂದ ತೆಗೆದಾಗ ನಾನು ಸಹಿ ಹಾಕಿಲ್ಲ. ಶರತ್ ಕುಮಾರ್ ಇವರ ಹೇಳಿಕೆ ಮೇರೆಗೆ ಆ್ಯಂಗುಲರ್, ಕುಡುಗೋಲು ಮತ್ತು ಪಂಚೆಯನ್ನು ತೆಗೆದಾಗ ನಾನು ಮಹಜರ್ ಗೆ ಸಹಿ ಹಾಕಿದ್ದೆ. ದಿಃ*11.06.2021* ರಂದು ಮ.*2.30* ರಿಂದ *3.30* ಗಂಟೆಗೆ ಆ ಮಹಜರ್ ಮಾಡಿದ್ದರು. ಕುಡುಗೋಲು ಮತ್ತು ಆ್ಯಂಗುಲರ್ ವ್ಯವಸಾಯಕ್ಕೆ ಉಪಯೋಗಿಸುವ ವಸ್ತು ಎಂದರೆ ನಿಜ ಸಾಕ್ಷಿ ಸ್ವತಃ ಹೇಳುತ್ತಾರೆ ಬೇರೆ ಕೆಲಸಕ್ಕೆ ಸಹ ಉಪಯೋಗಿಸುತ್ತಾರೆ. ಅತ್ವಾಳ್ ಕಟ್ಟೆಯಿಂದ ಬಿದಿರುಗೂಡಿನ ವರೆಗೆ ರಾಮಪುರ ನಾಲೆ ಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿಯಲ್ಲ. ಆ ನಾಲೆಯ ನೀರನ್ನು ಬಟ್ಟೆ ಒಗೆಯಲು ಮತ್ತು ದನಕ್ಕೆ ಕುಡಿಯಲು ಉಪಯೋಸುತ್ತಾರೆ ಎಂದರೆ ನಿಜ. ಆ ನಾಲೆಯಲ್ಲಿ ಹೂಳು ತುಂಬಿದೆ ಎಂದರೆ ನಿಜ. ವ್ಯವಸಾಯಕ್ಕೆ ಅನುಪಯುಕ್ತ ವಸ್ತುಗಳನ್ನು ಆ ನಾಲೆಯಲ್ಲಿ ಬಿಸಾಕುತ್ತಾರೆ ಎಂದರೆ ಸರಿಯಲ್ಲ. ದಿಃ*03.06.2021* ರಂದು ಶವ ಮಹಜರ್ ಗೆ ಸಹಿ ಹಾಕಿದಾಗ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಶವ ಮಹಜರ್ ಆದ ಬಳಿಕ ಪೋಲೀಸರು ಆಗಾಗ ನಮ್ಮ ಗ್ರಾಮಕ್ಕೆ ಬರುತ್ತಿದ್ದರು ಎಂದರೆ ನಿಜ. ಆ ರೀತಿ ಬಂದಾಗ ನಾನು ಹೇಳಿಕೆ ಕೊಟ್ಟಿಲ್ಲ. ಹೆಣ ತೆಗೆದ ಜಾಗದಲ್ಲಿ ನನ್ನ ಹೇಳಿಕೆ ಪಡೆದಿಲ್ಲ. ಶಿವರಾಜಪ್ಪ ಕಾಣೆಯಾಗಿ *5-6* ದಿನಗಳ ಬಳಿಕ ಹೆಣ ತೆಗೆದಿದ್ದರು.

*6.* ನಾನು ಪೋಲೀಸರಿಗೆ ಅಹಲ್ಯಾ ಗ್ರಾಮದ ಮದು ಎನ್ನುವವರ ಪರಿಚಯ ಇದೆ ಎಂದು ಹೇಳಿರಲಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಪೋಲೀಸರು ಕರೆದುಕೊಂಡು ಬಂದಾಗ ಆ ಬಗ್ಗೆ ಗೊತ್ತಾಗಿತ್ತು. ನಂಜನಗೂಡು ಕೋರ್ಟ್ ನಲ್ಲಿ ಹೇಳಿಕೆ ಕೊಟ್ಟಾಗ ಮದು

ಹೆಸರು ಹೇಳಿಲ್ಲ ಎಂದರೆ ನಿಜ. ನಾನು ಕೆಂಚಮಳ್ಳಿಯಿಂದ ಬರುತ್ತಿರುವಾಗ ಅತ್ವಾಳು ಕಟ್ಟೆ ಬಳಿ ಟ್ರಾಕ್ಟರ್ ಹೊಗುತ್ತಿದ್ದ ಬಗ್ಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜ. ಮದುವನ್ನು ಪೋ.ಠಾಣೆಯಲ್ಲಿ ನೋಡಿದ ಬಗ್ಗೆ ಸಹ ನ್ಯಾಯಾಧೀಶರ ಮುಂದೆ ಹೇಳಿಲ್ಲ ಎಂದರೆ ನಿಜ. ಶರತ್ ಕುಮಾರ್ ನನ್ನು ಈ ಕೇಸಿಗೆ ಸಿಕ್ಕಿಸುವ ಉದ್ದೇಶದಿಂದ ನನಗೆ ಗೊತ್ತಿಲ್ಲದ ವಿಷಯಗಳನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶರತ್ ಕುಮಾರ್ ರವರು ಬಹಳ ವರ್ಷಗಳಿಂದ ಟ್ರಾಕ್ಟರ್ ಅನ್ನು ಉಪಯೋಗಿಸುತ್ತಿದ್ದಾರೆ ಎಂದರೆ ನಿಜ. ಶರತ್ ಕುಮಾರ್ ರವರ ಜೊತೆ ಟ್ರಾಕ್ಟರ್ ನಲ್ಲಿ ಇನ್ನೊಬ್ಬ ವ್ಯಕ್ತಿಯನ್ನು ನೋಡಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಇನ್ನೊಬ್ಬ ವ್ಯಕ್ತಿ ಯಾರೆಂದು ಕಾಣುತ್ತಿರಲಿಲ್ಲ. ಆ ದಿನ ನಾವು ಟ್ರಾಕ್ಟರ್ ಹಿಂಭಾಗದಿಂದ ಬಂದು ಮುಂದಕ್ಕೆ ಹೋಗಿದ್ದೆವು. ಶವ ಮಹಜರ್ ಮಾಡಿದ ಬಳಿಕ ಪುನಃ ಯಾವತ್ತು ನನ್ನನ್ನು ಪೋ.ಠಾಣೆಗೆ ಕರೆಸಿಲ್ಲ. ಊರಲ್ಲಿ ಸಹ ನನ್ನ ಹೇಳಿಕೆ ಪಡೆದಿಲ್ಲ. ಶವ ಮಹಜರ್ ಗೆ ಸಹಿ ಹಾಕಿದ ಬಳಿಕ ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಪೋ.ಠಾಣೆಗೆ ಹೋಗಿಲ್ಲ. ಶರತ್ ಕುಮಾರ್ ಮತ್ತು ಮಲ್ಲಿಗಮ್ಮ ಅನೈತಿಕ ಸಂಬಂದದ ಕಾರಣಕ್ಕೆ ಆ ಕೊಲೆಯಾಗಿತ್ತು ಎಂದು ನನಗೆ ಗೊತ್ತಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ಅನೈತಿಕ ಸಂಬಂದದ ಬಗ್ಗೆ ನನಗೆ ಗೊತ್ತಿದೆ ಆದರೆ ಆ ಸಂಬಂದವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಹೆಣ ಸಿಗುವವರೆಗೆ ನಾನು ಅವರ ಸಂಬಂದದ ಬಗ್ಗೆ ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜ. ಶಿವರಾಜಪ್ಪ ನನ್ನ ಸಂಬಂದಿಕ ಎಂದರೆ ಸರಿಯಲ್ಲ. ಶಿವರಾಜಪ್ಪನ ಚಿಕ್ಕಪ್ಪನ ಮಗಳು ನನ್ನ ದೊಡ್ಡಪ್ಪನ ಮಗನನ್ನು ಮದುವೆಯಾಗಿದ್ದಾಳೆ. ನನ್ನ ಹೆಂಡತಿ ಪಂಚಾಯಿತಿ ಚುನಾವಣೆಗೆ ನಿಂತಿದ್ದಳು. ನಾನು,

ಮಹೇಶ ಮತ್ತು ಶಿವರಾಜಪ್ಪ ಯಾವಾಗಲೂ ಒಟ್ಟಿಗೆ ಇರುತ್ತಿದ್ದೆವು ಎಂದರೆ ಸರಿಯಲ್ಲ. ಶಿವರಾಜಪ್ಪ ಪಂಪ್ ಹೌಸ್ ನಲ್ಲಿ ಇಸ್ಪೀಟ್ ಆಡುತ್ತಿದ್ದರು ಎಂದರೆ ಸರಿಯಲ್ಲ. ಶಿವರಾಜಪ್ಪ ಹಲವು ಜನರ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಕ್ಕೆ ವಿವಾದಗಳು ಇದ್ದವು ಎಂದರೆ ಸರಿಯಲ್ಲ. ಶಿವರಾಜಪ್ಪನ ಸಹೋದರರ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶರತ್ ಕುಮಾರ್ ಹೇಳಿಕೆ ಮೇರೆಗೆ ಎಂ.ಒ *1* ರಿಂದ *3* ಅನ್ನು ತೆಗೆದಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ *1* ರಿಂದ *3* ಅನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**2 ನೇ ಆರೋಪಿ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**3 ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು